# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 686

ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 09-03-2026

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| ಪ್ರಶ್ನೆ | | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯಲ್ಲಿ ಪವನ ಶಕ್ತಿ ಹಾಗೂ ಸೌರ ಶಕ್ತಿ ವಿದ್ಯುತ್ ಮೇಲ್ಛಾವಣಿ (ಸೋಲಾರ್ ರೂಫ್ ಟಾಪ್) ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ನವೀಕರಿಸಬಹುದಾದ ಇಂಧನ ನೀತಿ 2022-27 ರನ್ವಯ ಸ್ವಯಂ ಬಳಕೆ/ಸಮೂಹ ಸ್ವಯಂ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ವರ್ಗದಡಿ ಪವನ ವಿದ್ಯುತ್ ಹಾಗೂ ಸೌರ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದಾಗಿದ್ದು, ರಾಜ್ಯಾದ್ಯಂತ ಕೊಪ್ಪಳ ಜಿಲ್ಲೆಯನ್ನೊಳಗೊಂಡಂತೆ ಅಭಿವೃದ್ಧಿದಾರರು ನೋಡಲ್ ಸಂಸ್ಥೆಯಾದ ಕೆ.ಆರ್.ಇ.ಡಿ.ಎಲ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.<br><br>ಕೊಪ್ಪಳ ಜಿಲ್ಲೆಯಲ್ಲಿ ಸೋಲಾರ್ ರೂಫ್ ಟಾಪ್ ಪ್ರೋತ್ಸಾಹಿಸಲು ಪಿ.ಎಂ. ಸೂರ್ಯಘರ್ ಮುಫ್ತ್ ಬಿಜಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಈ ಯೋಜನೆಯಡಿ ಗೃಹ ಬಳಕೆ ಗ್ರಾಹಕರಿಗೆ ಮಾತ್ರ ಕೇಂದ್ರ ಸರ್ಕಾರವು ಸಹಾಯಧನ ಒದಗಿಸುತ್ತಿದ್ದು, ವಿವರ ಕೆಳಗಿನಂತಿದೆ:<br>• ರೂ. 30,000/- ಪ್ರತಿ ಕಿ.ವ್ಯಾ.- 2 ಕಿ.ವ್ಯಾ. ವರೆಗೆ<br>• 3 ಕಿ.ವ್ಯಾ. ವರೆಗೆ, ಮೊದಲ 2 ಕಿ. ವ್ಯಾ ಗೆ ರೂ. 30000/- ಪ್ರತಿ ಕಿ.ವ್ಯಾ. ರಂತೆ ಮತ್ತು ಹೆಚ್ಚುವರಿ 1 ಕಿ.ವ್ಯಾ. ಸಾಮರ್ಥ್ಯಕ್ಕಾಗಿ ರೂ. 18,000/- ಪ್ರತಿ ಕಿ.ವ್ಯಾ.ಗೆ<br>• 3 ಕಿ.ವ್ಯಾ. ಗಿಂತ ಹೆಚ್ಚುವರಿ ಸಾಮರ್ಥ್ಯಕ್ಕಾಗಿ ಒಟ್ಟು ನೀಡುವ ಗರಿಷ್ಟ ಮೊತ್ತ ರೂ. 78,000/-<br><br>ಸದರಿ ಯೋಜನೆಯ ನೋಂದಣಿ ಶುಲ್ಕ ಮತ್ತು ಸೌಲಭ್ಯ ಶುಲ್ಕ ಹಾಗೂ ಮಾಪಕ ತಪಾಸಣಾ ಶುಲ್ಕವನ್ನು ಸಹ ಮನ್ನಾ ಮಾಡಲಾಗಿದೆ.<br><br>ಉಳಿದಂತೆ, ಗ್ರಾಹಕರು ಸಬ್ಸಿಡಿ ರಹಿತವಾಗಿ KERC ನಿಯಮಾವಳಿಗಳನ್ವಯ ತಮ್ಮ ಸ್ವಂತ ಬಂಡವಾಳದಲ್ಲಿ ಸೌರ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.<br><br>ಮುಂದುವರೆದು, ರಾಜ್ಯ ಸರ್ಕಾರದಿಂದ ಗೃಹ ಬಳಕೆ ಗ್ರಾಹಕರು ಅಳವಡಿಸಿಕೊಳ್ಳುವ 10 ಕಿ.ವ್ಯಾ.ಗಳ ವರೆಗಿನ ಸೋಲಾರ್ ರೂಫ್ ಟಾಪ್ ಸ್ಥಾವರಗಳಿಗೆ ಬಿಲ್ಲಿನಲ್ಲಿ ಪ್ರತಿ ಕಿ.ವ್ಯಾ ಗೆ ರೂ. 25/- ಗಳ ರಿಯಾಯಿತಿ ನೀಡಲಾಗುತ್ತಿದೆ.<br><br>150ಕಿ.ವ್ಯಾ. ಸಾಮರ್ಥ್ಯದವರೆಗಿನ ಗೃಹ ಬಳಕೆ ಸ್ಥಾವರದ ಗ್ರಾಹಕರಿಗೆ ಸೌರ ಮೇಲ್ಛಾವಣಿ ಅಳವಡಿಸಿಕೊಳ್ಳಲು ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುವುದರಿಂದ ವಿನಾಯತಿ ನೀಡಲಾಗಿದೆ.<br><br>ಸೌರ ಮೇಲ್ಛಾವಣಿ ಅಳವಡಿಸಿಕೊಳ್ಳಲು ಇದ್ದ ಗರಿಷ್ಟ ಹೊರೆ ಮಿತಿಯಾದ 2ಮೆ.ವ್ಯಾ. ಸಾಮರ್ಥ್ಯವನ್ನು ತೆಗೆದು, ಸ್ಥಾವರಗಳ ಅನುಮೋದಿತ/ಮಂಜೂರಾದ ಹೊರೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಸೌರ ಮೇಲ್ಛಾವಣಿ ಘಟಕ ಅಳವಡಿಸಿಕೊಳ್ಳಬಹುದಾಗಿದೆ.<br><br>ಗ್ರಾಹಕರ ಮಂಜೂರಾದ ಹೊರೆಯು ಸೌರ ಮೇಲ್ಛಾವಣಿ ಘಟಕದ ಸಾಮರ್ಥ್ಯಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಗ್ರಾಹಕರಿಗೆ 10ಕಿ.ವ್ಯಾ. ಸಾಮರ್ಥ್ಯದವರೆಗಿನ ಸೌರ ಮೇಲ್ಛಾವಣಿ ಘಟಕ ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಮತ್ತು ಗ್ರಾಹಕರ ಮಂಜೂರಾದ ಹೊರೆಯು ಸೌರ ಮೇಲ್ಛಾವಣಿ ಘಟಕದ ಸಾಮರ್ಥ್ಯಕ್ಕೆ ಸರಿಹೊಂದುವಂತೆ ಸ್ವಯಂಚಾಲಿತವಾಗಿ ಹೆಚ್ಚಿಸಲು ವಿದ್ಯುತ್ ಸರಬರಾಜು ಕಂಪನಿಗಳಿಂದ ಕ್ರಮ ಕೈಗೊಳ್ಳಲಾಗುತ್ತಿದೆ. |

<table>
<tr><td>ಆ)</td><td>ಕೊಪ್ಪಳ ಜಿಲ್ಲೆಯಲ್ಲಿ ಪವನ ಶಕ್ತಿ ಹಾಗೂ ಸೌರ ಶಕ್ತಿ ಮುಖಾಂತರ ಎಷ್ಟು ವಿದ್ಯುತ್ ಉತ್ಪಾದನೆ ಮಾಡಲು ಗುರಿ ಇಟ್ಟುಕೊಳ್ಳಲಾಗಿದೆ: ಪ್ರತಿ ಯೂನಿಟ್‌ಗೆ ಎಷ್ಟು ದರವನ್ನು ನಿಯಂತ್ರಣ ಆಯೋಗದಿಂದ ನಿಗಧಿಪಡಿಸಲಾಗಿದೆ:</td><td>CEA Validated Resource Adequacy Plan ಅನ್ವಯ ಕೊಪ್ಪಳ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ಖರೀದಿಗಾಗಿ ಪವನ-1591 ಮೆ.ವ್ಯಾ ಮತ್ತು ಸೌರ- 850 ಮೆ.ವ್ಯಾ ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗುರಿ ಹೊಂದಲಾಗಿದೆ.<br><br>ಪವನ ಮತ್ತು ಸೌರ ಯೋಜನೆಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳು ಟೆಂಡರ್ ಮುಖಾಂತರ ವಿದ್ಯುತ್ ಖರೀದಿಗೆ ಅನ್ವಯವಾಗುವಂತೆ KERC ಯಿಂದ ಪ್ರಸ್ತುತ ನಿಗಧಿಪಡಿಸಿರುವ ಪ್ರತಿ ಯೂನಿಟ್ ceiling ದರ ಈ ಕೆಳಗಿನಂತಿದೆ:<br>
<table>
<tr><th>ಮೂಲ</th><th>ಆದೇಶ ದಿನಾಂಕ</th><th>ಪ್ರತಿ ಯೂನಿಟ್ ದರ ರೂ. ಗಳಲ್ಲಿ</th></tr>
<tr><td>ಪವನ</td><td>27.03.2023</td><td>3.34/-</td></tr>
<tr><td>ಸೌರ</td><td>09.07.2025</td><td>3.07/-</td></tr>
</table></td></tr>
<tr><td>ಇ)</td><td>ಇಂಧನ ಇಲಾಖೆಯಿಂದ ಪವನ ಶಕ್ತಿ ಹಾಗೂ ಸೌರ ಶಕ್ತಿ ಮೇಲ್ಛಾವಣಿ ಘಟಕವನ್ನು ಪ್ರೋತ್ಸಾಹಿಸಲು ಬ್ಯಾಂಕ್ ಸೌಲಭ್ಯ ನೀಡಲು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆಯೇ?</td><td>ಕೇಂದ್ರ ಸರ್ಕಾರದ ಪಿ.ಎಂ ಸೂರ್ಯ ಘರ್ ಯೋಜನೆಯಡಿಯಲ್ಲಿ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸುವುದನ್ನು ಪ್ರೋತ್ಸಾಹಿಸಲು ಪ್ರಮುಖ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತದೆ. ಗ್ರಾಹಕರು ಜನಸಮರ್ಥ ಪೋರ್ಟಲ್ ಮುಖಾಂತರ ಸಾಲ ಪಡೆಯಲು ಅರ್ಜಿ ಸಲ್ಲಿಸಬಹುದು.<br>ಸದರಿ ಯೋಜನೆಯಡಿಯಲ್ಲಿ ಪ್ರಮುಖ ರಾಷ್ಟ್ರೀಕೃತ/ಖಾಸಗಿ ಬ್ಯಾಂಕುಗಳು ಕನಿಷ್ಠ ಶೇ 6.5 ರಿಂದ 7% ವರೆಗಿನ ಬಡ್ಡಿದರದಲ್ಲಿ ಮೇಲಾಧಾರ ರಹಿತ (Collateral Free) ಸಾಲ ಸೌಲಭ್ಯವನ್ನು ಒದಗಿಸುತ್ತಿವೆ.</td></tr>
</table>

ಸಂಖ್ಯೆ: ಎನರ್ಜಿ 50 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು